



# ಡೆಂಗಿ ಪ್ರಾಣಾಂತಿಕವಲ್ಲ..

ಡೆಂಗಿ ಪ್ರಾಣಾಂತಿಕ ಕಾಯಿಲೆಯಲ್ಲ. ಆರಂಭದಲ್ಲೇ ಸೂಕ್ತ ಚಿಕಿತ್ಸೆ ಪಡೆದರೆ ಪ್ರಾಣಾಪಾಯದಿಂದ ಪಾರಾಗಬಹುದು. ಆದರೆ ನಿರ್ಲಕ್ಷ್ಯ ಮಾಡಿದರೆ ಅಪಾಯ ಕಟ್ಟಿಟ್ಟ ಬುತ್ತಿ

■ ಡಾ.ಡಿ.ಕೆ. ಮಹಾಬಲರಾಜು

ಡೆಂಗಿ ಕಾಯಿಲೆಗೆ ಕಾರಣ ಒಂದು ವೈರಸ್. ಈ ವೈರಸ್‌ಗಳು ಡೆಂಗಿ ಜ್ವರವಿರುವ ಜನರಲ್ಲಿ ಮತ್ತು ಇದರ ರಕ್ತಹೀರಿದ ಸೊಳ್ಳೆಗಳ ದೇಹದಲ್ಲಿ ಬದುಕಿಕೊಂಡಿರುತ್ತವೆ. ವೈರಸ್ ಇರುವ ಸೊಳ್ಳೆಗಳು ಆರೋಗ್ಯವಂತನಿಗೆ ಕಚ್ಚಿದಾಗ ಆತನಿಗೆ ಡೆಂಗಿ ಸೋಂಕು ತಗಲುತ್ತದೆ.

ಕಳೆದ 30 ವರ್ಷಗಳಿಂದ ಡೆಂಗಿ ಜ್ವರ ವಿಶ್ವದೆಲ್ಲೆಡೆ ವ್ಯಾಪಕವಾಗಿ ಹರಡುತ್ತಿದೆ. ವಿಶ್ವದಲ್ಲಿ ಪ್ರತಿವರ್ಷ 50 ದಶಲಕ್ಷ ಜನರಿಗೆ ಡೆಂಗಿ ಜ್ವರ ತಗಲುತ್ತಿದ್ದು ಅದರಲ್ಲಿ 5 ಲಕ್ಷ ಜನರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಅಗತ್ಯವಾಗಿರುತ್ತದೆ. ಕಾಯಿಲೆಗೊಳಗಾಗುವವವರಲ್ಲಿ ಶೇಕಡಾ 90 ರಷ್ಟು 5 ವರ್ಷದ ಕೆಳಗಿನ ಮಕ್ಕಳೇ ಇರುತ್ತಾರೆ. ಶೇಕಡಾ 2.5 ರೋಗಿಗಳಲ್ಲಿ ಮಾತ್ರ ಕಾಯಿಲೆ ಮಾರಣಾಂತಿಕವಾಗಿರುತ್ತದೆ ಎಂಬುದು ದಾಖಲೆ ದೃಢಪಡಿಸಿದ ಅಂಶ.

ಇತ್ತೀಚಿನ ದಿನಗಳಲ್ಲಿ ಡೆಂಗಿ ಭಾರತದಲ್ಲಿ ಹೆಚ್ಚಾಗುತ್ತಿದ್ದು, ದೇಶದ 31 ರಾಜ್ಯಗಳಲ್ಲಿ, ಅದರಲ್ಲೂ ವಿಶೇಷವಾಗಿ ಪಂಜಾಬ್, ತಮಿಳುನಾಡು, ಗುಜರಾತ್, ಕೇರಳ ಮತ್ತು ಆಂಧ್ರ ಪ್ರದೇಶಗಳಲ್ಲಿ ಕಾಯಿಲೆಯ ಹಾವಳಿ ಹೆಚ್ಚಾಗಿದೆ. ಡೆಂಗಿ ಜ್ವರ ಪ್ರಕರಣಗಳು ಏರುಗತಿಯಲ್ಲಿ ಸಾಗುತ್ತಿದೆಯಾದರೂ ಡೆಂಗಿಯಿಂದ ಮರಣ ಹೊಂದುವವರ ಸಂಖ್ಯೆ ಇಳಿಕೆಯಾಗುತ್ತಿದೆ. ಭಾರತದಲ್ಲಿ ಪ್ರತಿ ವರ್ಷ 75 ಸಾವಿರ ಜನರಿಗೆ ಡೆಂಗಿ ಬರುತ್ತಿದ್ದು ಅದರಲ್ಲಿ 170 ಜನ ಡೆಂಗಿಯಿಂದ ಸಾಯುತ್ತಿದ್ದಾರೆ. ಈಗ ದೆಹಲಿಯಲ್ಲಿ ಡೆಂಗಿ ಡಂಗೂರ ಬಾರಿಸುತ್ತಿದೆ.

### ಈಡಿಸ್ ಸೊಳ್ಳೆ ಕಾಟ

ಎಲ್ಲಾ ರೀತಿಯ ಸೊಳ್ಳೆಗಳೂ ಡೆಂಗಿ ಕಾಯಿಲೆ ಹರಡುವುದಿಲ್ಲ. ಕೇವಲ ‘ಈಡಿಸ್’ ಎಂಬ ಪ್ರಭೇದದ ಸೊಳ್ಳೆ ಮಾತ್ರ ಡೆಂಗಿ ಹರಡುತ್ತದೆ. ಈ ಪ್ರಭೇದದ ಸೊಳ್ಳೆಗಳು ಇತರೆ ಜಾತಿಯ ಸೊಳ್ಳೆಗಳಿಗಿಂತ ಗಾತ್ರದಲ್ಲಿ ದೊಡ್ಡವು. ಇವುಗಳ ಕಪ್ಪು ಮೈ ಮೇಲೆ ಬಿಳಿ ಪಟ್ಟೆಗಳಿರುತ್ತವೆ. ಹೀಗಾಗಿ ಈ ಸೊಳ್ಳೆಯನ್ನು ‘ಹುಲಿ ಸೊಳ್ಳೆ’ ಎನ್ನುತ್ತಾರೆ. ಇವುಗಳಿಗೆ ಮನುಷ್ಯನ ರಕ್ತದ ಮೇಲೆ ವಿಶೇಷ ಆಸೆ. ಮನುಷ್ಯನ ಬಳಿ ವಾಸಿಸುತ್ತಾ, ಅವನ ರಕ್ತ ಕುಡಿಯುತ್ತಾ, ಆತನ ಮನೆಯಲ್ಲಿಯೇ ವಾಸಿಸುತ್ತವೆ. ‘ಉಂಡ ಮನೆಗೆ ದ್ರೋಹ ಬಗೆವ’ ಈ ಸೊಳ್ಳೆಗಳಿಗೆ ಹೆಚ್ಚು ರಕ್ತ ಬೇಕು. ಹಾಗಾಗಿ ಹಗಲಿನ ಹೊತ್ತಿನಲ್ಲೇ ಸ್ವಲ್ಪವೂ ಹೆದರಿಕೆ ಇಲ್ಲದೆ ಪದೇ ಪದೇ ಕಚ್ಚುತ್ತಾ ರಕ್ತ ಹೀರುತ್ತವೆ. ಒಮ್ಮೆ ಡೆಂಗಿ ರೋಗಿಯ ರಕ್ತ ಹೀರಿದವೆಂದರೆ, ಸೊಳ್ಳೆಗಳ ದೇಹದಲ್ಲಿ ವೈರಸ್‌ಗಳು ಶರವೇಗದಲ್ಲಿ ವೃದ್ಧಿಗೊಳ್ಳುತ್ತವೆ ಹಾಗೂ ಸೊಳ್ಳೆ ತನ್ನ ಜೀವನ ಪರ್ಯಂತ ವೈರಸ್‌ಗಳನ್ನು ಮಾನವನಿಗೆ ಅಂಟಿಸುತ್ತಾ ಇರುತ್ತದೆ. ಹೀಗಾಗಿ ಡೆಂಗಿ ಹರಡುವ ವೇಗವೂ ಹೆಚ್ಚು. ವೈರಸ್‌ಭರಿತ ಸೊಳ್ಳೆಯ ಸಂತತಿಗಳಿಗೂ ಮೊಟ್ಟೆ ಮೂಲಕ ವೈರಸ್ ರವಾನೆಯಾಗುತ್ತದೆ.